## ನಿಮ್ಮೊಡನೆ

# ದೇವರುಗಳನ್ನು ರಕ್ಷಿಸುವುದು ನಮ್ಮೆಲ್ಲರ ಕೆಲಸ!


> ವಾಹನಗಳ ಸದ್ದುಗದ್ದಲ ಹಾಗೂ ಅವುಗಳು ಹೊರಸೂಸುವ ಇಂಗಾಲದ ಹೊಗೆಯಿಂದ ದೇವರುಗಳನ್ನು ರಕ್ಷಿಸುವ ಕೆಲಸ ಕಾನೂನಿನದಷ್ಟೇ ಅಲ್ಲ, ಸಮಾಜದ್ದೂ ಹೌದು. ಅನಧಿಕೃತವಾಗಿ ಪೂಜಾಸ್ಥಳಗಳನ್ನು ನಿರ್ಮಿಸುವುದು ಕಾನೂನುಬಾಹಿರವಷ್ಟೇ ಅಲ್ಲ; ಧರ್ಮಬಾಹಿರವೂ ಹೌದು.

ರಸ್ತೆ, ಕುಡಿಯುವ ನೀರು, ಆಸ್ಪತ್ರೆ ಸೇರಿದಂತೆ ಮೂಲಭೂತ ಸೌಕರ್ಯಗಳ ಕೊರತೆಯಿರುವ ಪ್ರದೇಶಗಳು ದೇಶದಲ್ಲಿ ಸಾಕಷ್ಟಿವೆ. ವಿದ್ಯುತ್ ಹಾಗೂ ರಸ್ತೆಗಳಿಲ್ಲದ ಕುಗ್ರಾಮಗಳೂ ಇವೆ. ಆದರೆ, ಪೂಜಾಸ್ಥಳಗಳಿಲ್ಲದ ಊರುಕೇರಿಗಳನ್ನು ಕಾಣುವುದು ಕಷ್ಟ. ಭಾರತೀಯರ ಭಕ್ತಿಯ ಪರಾಕಾಷ್ಠೆ ಎಷ್ಟರಮಟ್ಟಿಗಿದೆಯೆಂದರೆ, ಸೂರಿಲ್ಲದ ಸಾವಿರಾರು ನಿರ್ಗತಿಕರ ನಡುವೆ ದೇವರಿಗೆ ಸುಲಭವಾಗಿ ನೆಲೆ ದೊರೆತುಬಿಡುತ್ತದೆ. ಪುಟ್ಟ ರಸ್ತೆ, ಪಾದಚಾರಿ ಮಾರ್ಗ, ಉದ್ಯಾನಗಳಲ್ಲಿ ಆರಾಧನಾಸ್ಥಳಗಳು ರಾತ್ರಿ ಕಳೆದು ಬೆಳಗಾಗುವಷ್ಟರಲ್ಲಿ ತಲೆಯೆತ್ತುತ್ತವೆ. ಮಕ್ಕಳು ಆಡುವ ಆಟದ ಮೈದಾನಗಳಲ್ಲೂ ಧಾರ್ಮಿಕ ಸ್ಥಾವರಗಳು ರೂಪುಗೊಳ್ಳುತ್ತವೆ. ಅನಧಿಕೃತ ಪೂಜಾಸ್ಥಳಗಳ ಹಾವಳಿಯನ್ನು ಗಮನಿಸಿ, ದೇಶದಾದ್ಯಂತ ಸಾರ್ವಜನಿಕ ಸ್ಥಳಗಳಲ್ಲಿ ಯಾವುದೇ ಹೊಸ ಆರಾಧನಾಸ್ಥಳ ನಿರ್ಮಿಸದಂತೆ ಸುಪ್ರೀಂಕೋರ್ಟ್ 2009ರಲ್ಲಿ ನಿರ್ದೇಶನ ನೀಡಿತ್ತು. ಮಂದಿರ, ಮಸೀದಿ, ಚರ್ಚ್, ಗುರುದ್ವಾರ ಸೇರಿದಂತೆ ಎಲ್ಲ ಪೂಜಾಸ್ಥಳಗಳಿಗೂ ಆ ನಿರ್ದೇಶನ ಅನ್ವಯಗೊಂಡಿತ್ತು. ಆದರೆ, ಸುಪ್ರೀಂಕೋರ್ಟ್ ಆದೇಶ ಪ್ರಕಟಗೊಂಡು ದಶಕದ ನಂತರವೂ ಸಾವಿರಾರು ಪೂಜಾಸ್ಥಳಗಳನ್ನು ತೆರವುಗೊಳಿಸುವುದು ಸಾಧ್ಯವಾಗಿಲ್ಲ.

ಸುಪ್ರೀಂಕೋರ್ಟ್ ನಿರ್ದೇಶನದ ಅನ್ವಯ, 2009ರ ಮೊದಲು ನಿರ್ಮಾಣಗೊಂಡಿರುವ ಅನಧಿಕೃತ ಪೂಜಾಸ್ಥಳಗಳನ್ನು ಗುರ್ತಿಸಿ, ಅವುಗಳನ್ನು ತೆರವುಗೊಳಿಸುವುದು, ಸ್ಥಳಾಂತರಿಸುವುದು ಅಥವಾ ಸಕ್ರಮಗೊಳಿಸುವುದು ರಾಜ್ಯ ಸರ್ಕಾರಗಳ ಜವಾಬ್ದಾರಿ. 2009ರ ನಂತರ ಅಕ್ರಮವಾಗಿ ನಿರ್ಮಾಣಗೊಂಡ ಪೂಜಾಸ್ಥಳಗಳನ್ನು ಕಡ್ಡಾಯವಾಗಿ ಕೆಡವಬೇಕೇ ಹೊರತು, ಸ್ಥಳಾಂತರಗೊಳಿಸಲು ಅವಕಾಶವಿಲ್ಲ.

ಕಳೆದ ಹನ್ನೆರಡು ವರ್ಷಗಳಲ್ಲಿ ಕರ್ನಾಟಕ ಸರ್ಕಾರ 2887 ಪೂಜಾಸ್ಥಳಗಳನ್ನು ತೆರವುಗೊಳಿಸಿದೆ, ಸ್ಥಳಾಂತರಗೊಳಿಸಿದೆ ಇಲ್ಲವೇ ಸಕ್ರಮಗೊಳಿಸಿದೆ. ಒಂದೆಡೆ ಅಕ್ರಮ ಆರಾಧನಾಸ್ಥಳಗಳನ್ನು ತೆರವುಗೊಳಿಸುವ ಪ್ರಕ್ರಿಯೆ ನಿಧಾನಗತಿಯಲ್ಲಿ ನಡೆಯುತ್ತಿದ್ದರೆ, ಇನ್ನೊಂದೆಡೆ ಹೊಸ ಪೂಜಾಸ್ಥಳಗಳು ರಸ್ತೆ, ಉದ್ಯಾನ, ಮೈದಾನಗಳಲ್ಲಿ ರೂಪುಗೊಳ್ಳುತ್ತಲೇ ಇವೆ. ಪೂಜಾಕೇಂದ್ರಗಳನ್ನು ನಿರ್ಮಿಸುವ ಮೂಲಕ ಸಾರ್ವಜನಿಕ ಸ್ಥಳಗಳನ್ನು ಅತಿಕ್ರಮಿಸುವ ಕೆಲಸ ನಡೆಯುತ್ತಲೇ ಇದೆ. 2021ರ ಜುಲೈ 1ರ ಲೆಕ್ಕಾಚಾರದಂತೆ ರಾಜ್ಯದಲ್ಲಿರುವ ಅನಧಿಕೃತ ಪೂಜಾಸ್ಥಳಗಳ ಸಂಖ್ಯೆ 6395. ಸುಪ್ರೀಂಕೋರ್ಟ್ ತೀರ್ಪಿನ ನಂತರವೂ ಸಾವಿರಾರು ಪೂಜಾಸ್ಥಳಗಳ ಅನಧಿಕೃತ ನಿರ್ಮಾಣ ರಾಜ್ಯದಲ್ಲಿ ನಡೆದಿದೆ. ಸಾರ್ವಜನಿಕ ಸ್ಥಳಗಳಲ್ಲಿ ಅಕ್ರಮವಾಗಿ ಪೂಜಾಸ್ಥಳಗಳು ನಿರ್ಮಾಣಗೊಂಡಿರುವ ರಾಜ್ಯದ ಜಿಲ್ಲೆಗಳಲ್ಲಿ, ದಕ್ಷಿಣ ಕನ್ನಡ (1,579) ಮೊದಲ ಸ್ಥಾನದಲ್ಲಿದೆ. ನಂತರದ ಸ್ಥಾನದಲ್ಲಿ ಶಿವಮೊಗ್ಗ (740), ಬೆಳಗಾವಿ (612), ಕೋಲಾರ (397), ಬಾಗಲಕೋಟೆ (352), ಧಾರವಾಡ (324), ಮೈಸೂರು (315), ಕೊಪ್ಪಳ (306) ಜಿಲ್ಲೆಗಳಿವೆ.

ಅಕ್ರಮ ಪೂಜಾಸ್ಥಳಗಳನ್ನು ತೆರವುಗೊಳಿಸುವ ಪ್ರಕ್ರಿಯೆ ಆಮೆವೇಗದಲ್ಲಿ ನಡೆಯುತ್ತಿರುವುದರ ಬಗ್ಗೆ ಹೈಕೋರ್ಟ್ ಕಳವಳ ವ್ಯಕ್ತಪಡಿಸಿದೆ. ತಮ್ಮ ವ್ಯಾಪ್ತಿಯಲ್ಲಿ ಪ್ರತಿ ವಾರ ಒಂದಾದರೂ ಅನಧಿಕೃತ ಪೂಜಾಸ್ಥಳವನ್ನು ತೆರವುಗೊಳಿಸಲು ಸಾಧ್ಯವಾಗುವಂತೆ ಕ್ರಿಯಾಯೋಜನೆಯನ್ನು ರೂಪಿಸುವಂತೆ ಜಿಲ್ಲಾಧಿಕಾರಿಗಳು ಹಾಗೂ ಸ್ಥಳೀಯ ಪ್ರಾಧಿಕಾರಿಗಳ ಅಧಿಕಾರಿಗಳಿಗೆ ರಾಜ್ಯಸರ್ಕಾರ ಸೂಚಿಸಿದೆ. ಆದರೆ, ಅನಧಿಕೃತ ಪೂಜಾಸ್ಥಳಗಳನ್ನು ತೆರವುಗೊಳಿಸುವ ಕೆಲಸ ಸುಲಭವಾದುದಲ್ಲ. ಕಾರ್ಮಿಕರು ಮತ್ತು ಅಧಿಕಾರಿಗಳು ಸಾರ್ವಜನಿಕರ ಪ್ರತಿರೋಧ ಹಾಗೂ ಬೆದರಿಕೆ ಎದುರಿಸಬೇಕಾಗುತ್ತದೆ. ಸ್ಥಳೀಯ ರಾಜಕಾರಣ ಕೂಡ ಅನಧಿಕೃತ ಪೂಜಾಸ್ಥಳಗಳಿಗೆ ರಕ್ಷಣೆಯಾಗಿ ನಿಲ್ಲುತ್ತದೆ. ಸ್ಥಳೀಯರನ್ನು ವಿಶ್ವಾಸಕ್ಕೆ ತೆಗೆದುಕೊಂಡೇ ಇಂಥ ಕೆಲಸಗಳನ್ನು ಮಾಡಬೇಕಾಗುತ್ತದೆ. ಜನಪ್ರತಿನಿಧಿಗಳು ಪಕ್ಷಾತೀತವಾಗಿ ವರ್ತಿಸಿ, ಸಾರ್ವಜನಿಕರ ಮನವೊಲಿಸಬೇಕಾಗುತ್ತದೆ. ಸಾರ್ವಜನಿಕ ಸ್ಥಳಗಳನ್ನು ಅತಿಕ್ರಮಿಸಲು ಯಾರಿಗೂ ಅವಕಾಶ ಮಾಡಿಕೊಡದಿರುವ ಇಚ್ಛಾಶಕ್ತಿಯನ್ನು ಸರ್ಕಾರ ಹೊಂದಿದ್ದಾಗ ಮಾತ್ರ ಅಕ್ರಮ ಪೂಜಾಸ್ಥಳಗಳನ್ನು ತೆರವುಗೊಳಿಸುವ ಕೆಲಸ ವೇಗ ಪಡೆದುಕೊಳ್ಳುವುದು ಸಾಧ್ಯ. ನಿರ್ದಿಷ್ಟ ಕಾಲಮಿತಿಯಲ್ಲಿ ಕ್ರಿಯಾಯೋಜನೆಗಳನ್ನು ರೂಪಿಸಿಕೊಳ್ಳದೆ ಹೋದರೆ, ಒಂದೆಡೆ ಪೂಜಾಸ್ಥಳಗಳ ತೆರವು ನಿಧಾನಗತಿಯಲ್ಲಿ ಸಾಗುತ್ತಿದ್ದರೆ, ಇನ್ನೊಂದೆಡೆ ಹೊಸ ಹೊಸ ದೇವರುಗಳ ಸ್ಫೋಟ ರಸ್ತೆ, ಉದ್ಯಾನಗಳಲ್ಲಿ ನಡೆಯುತ್ತಲೇ ಇರುತ್ತದೆ.



ಈಶ್ವರ್

ಪ್ರಾರ್ಥನಾಸ್ಥಳಗಳ ಕುರಿತಂತೆ ಜನರಲ್ಲಿ ಅರಿವು ಮೂಡಿಸುವ ಕೆಲಸ ವ್ಯಾಪಕವಾಗಿ ನಡೆಯಬೇಕಾಗಿದೆ. ಪೂಜಾಸ್ಥಳಗಳು ಇರಬೇಕಾದುದು ರಸ್ತೆಯ ನಡುವೆಯಲ್ಲ ಎನ್ನುವುದು ಸಾಮಾನ್ಯಜ್ಞಾನ. ಪ್ರಾರ್ಥನೆಗೆ ಬೇಕಾದ ಮೌನ ಮತ್ತು ಏಕಾಂತ ಗದ್ದಲದ ಸ್ಥಳಗಳಲ್ಲಿ ದೊರೆಯುವುದಿಲ್ಲ. ಸಾವಿರ ಸಾವಿರ ವಾಹನಗಳ ಸದ್ದುಗದ್ದಲ ಹಾಗೂ ಅವುಗಳು ಹೊರಸೂಸುವ ಇಂಗಾಲದ ಹೊಗೆಯಿಂದ ದೇವರುಗಳನ್ನು ರಕ್ಷಿಸುವ ಕೆಲಸ ಕಾನೂನಿದ್ದಷ್ಟೇ ಅಲ್ಲ, ಸಮಾಜದ್ದೂ ಹೌದು. ಅನಧಿಕೃತವಾಗಿ ಪೂಜಾಸ್ಥಳಗಳನ್ನು ನಿರ್ಮಿಸುವುದು ಕಾನೂನುಬಾಹಿರವೂ ಹೌದು; ಧರ್ಮಬಾಹಿರವೂ ಹೌದು. ಅದು ದೈವ ಮೆಚ್ಚುವ ಕೆಲಸವೂ ಅಲ್ಲ. ಸಾರ್ವಜನಿಕ ಸ್ಥಳಗಳಲ್ಲಿ ನಿರ್ಮಾಣವಾಗುವ ಪೂಜಾಕೇಂದ್ರಗಳ ಹಿನ್ನೆಲೆಯಲ್ಲಿ ಭಕ್ತಿ, ಧರ್ಮಶ್ರದ್ಧೆಗಿಂತಲೂ ವೈಯಕ್ತಿಕ ಹಾಗೂ ರಾಜಕೀಯ ಹಿತಾಸಕ್ತಿಗಳು ಹೆಚ್ಚಿನ ಪ್ರಮಾಣದಲ್ಲಿ ಇರುವುದನ್ನು ಜನಸಾಮಾನ್ಯರು ಅರ್ಥಮಾಡಿಕೊಂಡರೆ, ಭಕ್ತಿ ಬೀದಿಗೆ ಬರುವುದನ್ನು ಬಹುಮಟ್ಟಿಗೆ ತಪ್ಪಿಸಬಹುದು.

■ ರಘುನಾಥ ಚ.ಹ.